**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 3613/2023 ಸಿ.ಡಬ್ಲ್ಯೂ –1 ಪಿ.ಡಬ್ಲ್ಯೂ -3

| | | |
|---|---|---|
| ಹೆಸರು | ಃ | ಚನ್ನಮ್ಮ |
| ತಂದೆಃ ಗಂಡ | ಃ | ಮಲ್ಲಿಕಾರ್ಜುನ |
| ವಯಸ್ಸು | ಃ | ೩೫ ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಮಮದಾಪೂರ |

ದಿನಾಂಕಃ ೨೭.೦೬.೨೦೨೪
ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿತರ ಪರಿಚಯ ಇರುತ್ತದೆ. ಚಾಸಾ-4 ನನ್ನ ಗಂಡ, ಚಾಸಾ-5 ನನ್ನ ನೆಗೆಣಿ, ಚಾಸಾ-6 ನನ್ನ ಅತ್ತೆ, ಚಾಸಾ-7 ನನ್ನ ಮೈದುನ, ಚಾಸಾ-2, 3, 8, 9 ರವರ ಪರಿಚಯ ಇರುತ್ತದೆ.

ದಿ.28.03.2023 ರಂದು ಬೆಳಿಗ್ಗೆ 8.55 ಕ್ಕೆ ಆರೋಪಿತರು ನಮ್ಮ ಮನೆಗೆ ಬಂದು ನಮ್ಮನ್ನು ಹೊಡೆ ಬಡೆ ಮಾಡಿರುತ್ತಾರೆ. ನ್ಯಾಯಾಲಯದಲ್ಲಿ ದಾವೆ ಇದೆ ಅದರ ಪ್ರಕಾರ ಏನಾದರೂ ಆಗಲಿ ಎಂದು ಹೇಳಿದರೂ ನಮ್ಮನ್ನು ಹೊಡೆದಿರುತ್ತಾರೆ. ನಾನು ಪ್ರಜ್ಞೆ ತಪ್ಪಿ ಬಿದ್ದರೂ ನನಗೆ ಹೊಡೆ ಬಡೆ ಮಾಡಿರುತ್ತಾರೆ. ಚಾಸಾ-5 ಮತ್ತು 6 ರವರು ನನಗೆ ನೀರು ಹಾಕಿ ಪ್ರಜ್ಞೆ ಬರಿಸಿ ಒಳಗೆ ಹೋಗಿ ಕೂಡಿಸಿದ್ದರೂ ನನ್ನನ್ನು ಹೊಡೆ ಬಡೆ ಮಾಡಿರುತ್ತಾರೆ. ಆರೋಪಿತರು ಅಷ್ಟೇ ಅಲ್ಲದೇ ಅವರ ಬೀಗರನ್ನು ಕರೆಯಿಸಿ ಹೊಡೆ ಬಡೆ ಮಾಡಿರುತ್ತಾರೆ. ನಂತರ ಅಕ್ಕ ಪಕ್ಕದ ಜನರು ಜಗಳ ಬಿಡಿಸಿರುತ್ತಾರೆ. ನಾವು ಮನೆ ಒಳಗೆ ಕುಳಿತು ಸುಧಾರಿಸಿಕೊಂಡು ಆಸ್ಪತ್ರೆಗೆ ಹೋಗಿ ನಂತರ ಪೋಲಿಸ್ ಠಾಣೆಗೆ ಹೋಗಿ ಫಿರ್ಯಾದಿ ಸಲ್ಲಿಸಿರುತ್ತೇನೆ, ಮರುದಿನ ಬಂದು ಪೋಲಿಸರು ಪಂಚನಾಮೆ ಜರುಗಿಸಿರುತ್ತಾರೆ. ಸಾಕ್ಷಿ ಫಿರ್ಯಾದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಫಿರ್ಯಾದಿಯನ್ನು ನಿಪಿ-೨ ಎಂದು, ಸಹಿಯನ್ನು ನಿಪಿ-೨(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ಆರೋಪಿತರೆಲ್ಲರೂ ನಮ್ಮ ಮನೆಯ ಮುಂದೆ ಬಂದು ಏ ರಂಡಿ ಮಕ್ಕಳೇ ನಾವು ಜೋಳ ಕೊಯ್ಯಲು ಹೋದಾಗ ನಮಗೆ ತಕರಾರು ಮಾಡಿರುತ್ತೀರಿ ನಿಮ್ಮದು ಬಹಳ ಆಗಿದೆ ಎಂದು ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿ. ಆರೋಪಿ ನಂ.೨ ಮತ್ತು ೫ ರವರು ನನ್ನನ್ನು ಕೈಯಿಂದ ಹಿಡಿದು ಎಳೆದಾಡಿ ಹೊಡೆದಿರುತ್ತಾರೆ ಎಂದರೆ ಸರಿ. ಆರೋಪಿ ನಂ.೬ ನನಗೆ ಎದೆಗೆ ಹಾಗೂ ಹೊಟ್ಟೆಗೆ ಕೈಯಿಂದ

ಹೊಡೆದಿರುತ್ತಾರೆ ಎಂದರೆ ಸರಿ. ಚಾಸಾ-೪ ರವರು ಬಿಡಿಸಲು ಬಂದಾಗ ಆರೊಪಿ ನಂ.೩ ಮತ್ತು ೪ ರವರು ಚಾಸಾ-೪ ರವರನ್ನು ಹೊಡೆ ಬಡೆ ಮಾಡಿರುತ್ತಾರೆ ಎಂದರೆ ಸರಿ. ಆರೋಪಿ ನಂ.೭ ಚಾಸಾ-೫ ರವರಿಗೆ ಕೈಯಿಂದ ಹೊಡೆದಿರುತ್ತಾರೆ ಎಂಧರೆ ಸರಿ. ಚಾಸಾ-೭ ರವರು ಆರೋಪಿತರಿಗೆ ಜಗಳ ಮಾಡುವುದು ಸರಿಯಲ್ಲ, ಏನಾದರೂ ಹೆಚ್ಚು ಕಡಿಮೆ ಆದರೆ ನೀವೇ ಹೊಣೆ ಎಂದು ಹೇಳಿರುತ್ತಾರೆ ಎಂದರೆ ಸರಿ. ಆರೋಪಿ ನಂ.೭ರವರು  ಚಾಸಾ-೬ ರವರ ಕೈ ಹಿಡಿದು ಎಳೆದಾಡಿರುತ್ತಾರೆ ಎಂದರೆ ಸರಿ. ಇವತ್ತು ಉಳಿದಿರಿ ಇನ್ನೊಮ್ಮೆ ನಮ್ಮ ತಂಟೆಗೆ ಬಂದರೆ ನಿಮ್ಮನ್ನು ಜೀವ ಸಹಿತ ಖಲಾಸ ಮಾಡುತ್ತೇವೆ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.  ಚಾಸಾ-೬ ಮನೆಗೆ ಬಂದ ನಂತರ ವಿಚಾರ ಮಾಡಿ ಎಲ್ಲರೂ ಹೋಗಿ ಫಿರ್ಯಾದಿ ಕೊಟ್ಟಿರುತ್ತೇವೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿತರ ಪರ ಶ್ರೀ  ಎಸ್.ಎಸ್.ಸಿ. ವಕೀಲರಿಂದ**

ನನ್ನ ಮಾವನ ಹೆಸರು ಹಣಮಂತ ಎಂದರೆ ಸರಿ. ಹಣಮಂತ ಅವರ ತಂದೆ ಹೆಸರು ಭೀಮಶ್ಯಾ ಎಂದರೆ ಸರಿ. ಭೀಮಣ್ಣಾ ಮತ್ತು ರಾಮಣ್ಣಾ ಖಾಸ ಅಣ್ಣ ತಮ್ಮಂದಿರು ಎಂದರೆ ಸರಿ, ಆರೋಪಿ ನಂ.೧ ರಾಮಣ್ಣ ರವರ ಮಗ ಎಂದರೆ ಸರಿ. ರಾಮಣ್ಣ ಅವರಿಗೆ ಆರೋಪಿ ನಂ.೧ ಒಬ್ಬರೇ ಮಗ ಎಂದರೆ ಸರಿ. ಭೀಮಣ್ಣಾ ಅವರಿಗೆ ನನ್ನ ಮಾವ ಹಣಮಂತ ಒಬ್ಬರೇ ಮಗ ಎಂದರೆ ಸರಿ. ಭೀಮಣ್ಣ ಮತ್ತು ರಾಮಣ್ಣ ಅವರ ತಂದೆ ಇರುವಾಗಲೇ ಪಾಲು ವಾಟ್ನಿಯನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಪಾಲು ವಾಟ್ನಿಯ ನಂತರ ಅವರವರ ಜಮೀನುಗಳಲ್ಲಿ ಅವರವರೇ ಕಬ್ಜಾವಹಿವಾಟಿಯಲ್ಲಿರುತ್ತಾರೆ ಎಂದರೆ ಸರಿ. ಸದರಿ ನಮ್ಮ ಮಾವ ಹಣಮಂತ ತೀರಿಕೊಂಡ ನಂತರ ಅವರ ಪಾಲಿಗೆ ಬಂದ ಜಮೀನಿನಲ್ಲಿ ನಾವು ಕಬ್ಜಾವಹಿವಾಟಿಯಲ್ಲಿರುತ್ತೇವೆ ಎಂದರೆ ಸರಿ. ಹಂಚಿಕೆ ಪ್ರಕಾರ ಆಯಾ ಜಮೀನುಗಳಲ್ಲಿ ಬಂದಾರಿ ಇರುತ್ತವೆ ಎಂದರೆ ಸರಿ. ಸದರಿ ಜಮೀನುಗಳ ಸ.ನಂ.ಗಳು ನನಗೆ ನಿರ್ದಿಷ್ಟವಾಗಿ ಗೊತ್ತಿಲ್ಲ ಸ.ನಂ. ೯ ಮತ್ತು ೬ ಇರಬಹುದು ಎಂದು ನುಡಿಯುತ್ತಾರೆ. ಸ.ನಂ.೯ ರಲ್ಲಿ ನಮ್ಮ ಪಾಲಿಗೆ ಬಂದ ಜಮೀನಿನಲ್ಲಿ ನಾವು ಇರುತ್ತೇವೆ, ಅರೋಪಿತರ ಪಾಲಿಗೆ ಬಂದ ಜಮೀನಿನಲ್ಲಿ ಅವರು ಇರುತ್ತಾರೆ ಎಂದರೆ ಸಾಕ್ಷಿ ಅವರು ಜಮೀನನ್ನು ಸಾಗು ಮಾಡಿಕೊಳ್ಳುತ್ತಿದ್ದಾರೆ ನಮ್ಮ ಜಮೀನು ಬೀಳಾ ಬಿದ್ದಿರುತ್ತದೆ ಎಂದು ನುಡಿಯುತ್ತಾರೆ.  ಸದರಿ ಸ.ನಂ.೯ರಲ್ಲಿ ಪೂರ್ವ ದಿಕ್ಕಿಗೆ ನಮ್ಮ ಜಮೀನು ಬರುತ್ತದೆ  ಪಶ್ಚಿಮ ದಿಕ್ಕಿಗೆ ಆರೋಪಿತರ ಜಮೀನು ಬರುತ್ತದೆ ಎಂದರೆ ಸಾಕ್ಷಿ ನನಗೆ ಅಷ್ಟೇನು ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸ.ನಂ. ೯ರಲ್ಲಿ ನಮಗೆ ೧೨ ಎ-೨೦ ಗುಂಟೆ, ಮತ್ತು ಆರೊಪಿತರ ಪಾಲಿಗೆ ೮ ಎ-೨೪ ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸ.ನಂ.೯ ರಲ್ಲಿ ಚಾಸಾ-೫ ರಿಂದ ೬ ರವರು ಹಂಚಿಕೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ, ಇನ್ನೂ ೮ ಎಕರೆ ಜಮೀನು ಕ್ಲಿಯರ್ ಇಲ್ಲ ಅದು ಆಗಿಲ್ಲ ಎಂದು ನುಡಿಯುತ್ತಾರೆ. ಚಾಸಾ-೫ ರವರು ೪ ಎಕರೆ, ಚಾಸಾ-೬ ರವರು ೨ ಎಕರೆ ಒಟ್ಟು ೬ ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ.  ಯಾವ ಸ.ನಂ. ಸಲುವಾಗಿ ನ್ಯಾಯಾಲಯದಲ್ಲಿ ದಾವೆ ಇದೆ ಎಂದು ನಿಮಗೆ ಗೊತ್ತಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ಫಿರ್ಯಾದಿಯಲ್ಲಿ ಯಾವ ಸ.ನಂ. ಕುರಿತು ದಾವೆ ಇದೆ ಎಂದು ಬರೆದಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಸರಿಯಾಗಿ ಪ್ರಜ್ಞೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ಫಿರ್ಯಾದಿಯಲ್ಲಿ ನನಗೆ ಪ್ರಜ್ಞೆ ತಪ್ಪುವ ಹಾಗೆ ಹೊಡೆದಿರುತ್ತಾರೆ ಎಂದು ಪೋಲಿಸರಿಗೆ ಹೇಳಿ

ಬರೆಸಿರುತ್ತೇನೆ. ಪ್ರಜ್ಞೆ ಬಂದ ನಂತರ ಮತ್ತೆ ಹೊಡೆದಿದ್ದಾರೆ ಎಂದು ಹೇಳಿ ಪೀರ್ಯಾದಿಯಲ್ಲಿ ಬರೆಸಿದ್ದಿರಾ ಎಂಥರೆ ಸಾಕ್ಷಿ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನನ್ನ ಫಿರ್ಯಾದಿಯಲ್ಲಿ ಆರೋಪಿತರು ಅವರ ಬೀಗರನ್ನು ಕರೆಯಿಸಿ ನಮಗೆ ಹೊಡೆದಿರುತ್ತಾರೆ ಎಂದು ಹೇಳಿ ಬರೆಸಿರುತ್ತೇನೆ. ಅವರ ಹೆಸರು ನಿಮಗೆ ಹೇಳಲು ಬರುತ್ತದೆಯಾ ಎಂಥರೆ ಸಾಕ್ಷಿ ಅವರ ಹೆಸರು ಪಂಡಿತ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಸದರಿ ಪಂಡಿತ ಅವರ ಹೆಸರನ್ನು ಪೋಲಿಸರ ಮುಂದೆ ಹೇಳಿರುತ್ತೇನೆ, ಆದರೆ ಅವರು ಇದ್ದು ಬಿದ್ದರವರ ಹೆಸರನ್ನು ಹೇಳಿದರೆ ಬರೆದುಕೊಳ್ಳುವುದಿಲ್ಲ ಎಂದು ಹೇಳಿರುತ್ತಾರೆ.

ಸದರಿ ಘಟನೆಯಿಂದ ನಿನಗಾಗಲಿ, ಚಾಸಾ-೪, ೫, ೬ ರವರಿಗಾಗಲಿ ಏನಾದರೂ ರಕ್ತಗಾಯ ಆಗಿತ್ತಾ ಎಂದರೆ ಸಾಕ್ಷಿಯು ನನಗೆ ಬಳೆ ಚೂರು ನಟ್ಟು ರಕ್ತಗಾಯ ಆಗಿತ್ತು ಉಳಿದವರಿಗೆ ರಕ್ತಗಾಯ ಆಗಿರುವುದಿಲ್ಲ ಎಂದು ನುಡಿಯುತ್ತಾರೆ, ಮುಂದುವರೆದು ಚಾಸಾ-೫ ರವರಿಗೆ ಕಿರುಬೆರಳಿಗೆ ಒಳಪೆಟ್ಟು ಆಗಿತ್ತು ಎಂದು ನುಡಿಯುತ್ತಾರೆ. ನನಗೆ ಆರೋಪಿತರು ಎಲ್ಲಿ ಎಲ್ಲಿ ಹೊಡೆದರು ಎಂದು ಹೇಳಲು ಬರುತ್ತದೆ, ಆರೋಪಿ ನಂ.೨ ನನಗೆ ಬೆನ್ನಿಗೆ ಹೊಡೆದಿರುತ್ತಾರೆ, ಆರೋಪಿ ನಂ. ೧ ಚಾಸಾ-೪ ರವರಿಗೆ ಹೊಡೆದಿರುತ್ತಾರೆ, ಆರೋಪಿ ನಂ.೬ ಕಪಾಳಕ್ಕೆ ಹೊಡೆದಿರುತ್ತಾರೆ, ನೆಲಕ್ಕೆ ಬಿದ್ದ ತಕ್ಷಣ ಎಲ್ಲರೂ ಬಂದು ಹೊಡೆದಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಪೋಲಿಸರಿಗೆ ಈಗ ಹೇಳಿದ ಹಾಗೆ ಹೇಳಿರುತ್ತೇನೆ, ಪೋಲಿಸರು ಬರೆದುಕೊಂಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ, ಆಗ ನಾನು ಅಸ್ತವ್ಯಸ್ತವಾಗಿದ್ದೆ ಎಂದು ನುಡಿಯುತ್ತಾರೆ. ಸದರಿ ಘಟನೆಯು ೧೫-೨೦ ನಿಮಿಷ ನಡೆದಿರುತ್ತದೆ. ಘಟನೆ ನಡೆದ ಸಮಯದಲ್ಲಿ ಆರೋಪಿತರನ್ನು ಬಿಟ್ಟು ಬೇರೆ ಯಾರೂ ನನ್ನ ಕಣ್ಣಿಗೆ ಕಂಡಿರುವುದಿಲ್ಲ.

ಚಾಸಾ-೭ ರವರು ಘಟನೆ ನಡೆದ ಸಮಯದಲ್ಲಿ ಇರಲಿಲ್ಲ, ಗಾಡಿಯ ಕೆಲಸಕ್ಕೆ ಹೋಗಿದ್ದರು. ಸದರಿ ಚಾಸಾ-೭ ರವರು ಘಟನೆ ಆದ ಅರ್ಧ ಗಂಟೆಯಿಂದ ಒಂದು ಗಂಟೆ ಒಳಗೆ ಬಂದಿರುತ್ತಾರೆ. ಚಾಸಾ-೭ ರವರು ಬಂದ ಮೇಲೆ ಯಾವ ರೀತಿ ಫಿರ್ಯಾದಿ ಕೊಡಬೇಕೆಂದು ವಿಚಾರ ಮಾಡಿರುತ್ತೇವೆ ಎಂದರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ನಾನು ಹೊಡೆಸಿಕೊಂಡ ಕಾರಣ ಫಿರ್ಯಾದಿಯನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಘಟನೆ ನಂತರ ಮೊದಲು ಪೋಲಿಸ್ ಠಾಣೇಗೆ ಹೋಗಿರುತ್ತದೆ, ನಂತರ ಆಸ್ಪತ್ರೆಗೆ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ನಾವು ಆಸ್ಪತ್ರೆಗೆ ಹೋದಾಗ ಎಷ್ಟು ಗಂಟೆ ಆಗಿತ್ತು ಎಂದು ನನಗೆ ನೆನಪಿಲ್ಲ, ನಾನು ಅಸ್ತವ್ಯಸ್ತವಾಗಿದ್ದೆ. ನನಗೆ ಆಸ್ಪತ್ರೆಗೆ ಚಾಸಾ-೪ ರಿಂದ ೭ ರವರು ಕರೆದುಕೊಂಡು ಹೋಗಿರುತ್ತಾರೆ. ಆಸ್ಪತ್ರೆಯಲ್ಲಿ ಎಷ್ಟು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರಿ ಎಂಥರೆ ಸಾಕ್ಷಿ ಅಲ್ಲಿ ದಾಖಲು ಮಾಡಿಕೊಳ್ಳಲಿಲ್ಲ, ಖಾಸಗಿ ಆಸ್ಪತ್ರೆಗೆ ವೈದ್ಯರಾದ ಡಾ. ಯೋಗೇಶ ರವರ ಬಳಿ ಚಿಕಿತ್ಸೆ ಪಡೆದುಕೊಂಡು ಮನೆಗೆ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ಪೋಲಿಸರು ನಿಮ್ಮ ಫಿರ್ಯಾದಿಯನ್ನು ಕೈಯಿಂದ ಬರೆದುಕೊಂಡರಾ ಎಂದರೆ ಸಾಕ್ಷಿಯು ಅವರು ಕೈಯಿಂದ ಬರೆದುಕೊಂಡರೋ ಅಥವಾ ಗಣಕೀಕೃತ ಮಾಡಿಕೊಂಡರೋ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪೊಲಿಸರು ಸಹಿ ಮಾಡು ಎಂದು ಹೇಳಿದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಪಿರ್ಯಾದಿಯಲ್ಲಿ ಬರೆದ ಸಂಗತಿ ನನಗೆ ಗೊತ್ತಿಲ್ಲ ಎಂದರೆ ಸರಿ. ನಂತರ ಪೋಲಿಸರು ನನ್ನನ್ನು ಠಾಣೆಗೆ ಕರೆಸಿರುವುದಿಲ್ಲ ಎಂದರೆ ಸರಿ. ಈ ಘಟನೆ ನಡೆದ ನಂತರ ಆರೋಪಿತರು ಮಮದಾಪೂರ ಗ್ರಾಮದಲ್ಲಿಯೇ ಇರುತ್ತಾರೆ, ಎಲ್ಲಿಯೂ ಹೋಗಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೊಪಿ ನಂ. ೩ ರಿಂದ ೫ ರವರು ಕೆಲಸದ ನಿಮಿತ್ಯವಾಗಿ

ಬೆಂಗಳೂರಿನಲ್ಲಿ ಇರುತ್ತಾರೆ ಎಂದರೆ ಸರಿ. ಆರೋಪಿ ನಂ.೧ ನಿವೃತ್ತ ಪೋಲಿಸ್ ಅಧಿಕಾರಿ ಎಂದರೆ ಸರಿ.

ಆರೋಪಿ ನಂ.೧ ರವರು ಚಾಸಾ-೪ ಮತ್ತು ೭ ರವರ ಮೇಲೆ ಅವರ ಜಮೀನು ಸ.ನಂ.೯/೧ ರಲ್ಲಿ ಅತಿಕ್ರಮಣ ಮಾಡಿ ಗಳೆ ಹೊಡೆದಿದ್ದಾರೆ ಎಂದು ಹೇಳಿ ಫಿರ್ಯಾದಿ ಸಲ್ಲಿಸಿದ್ದರು ಅದು ಪ್ರಕರಣ ದಾಖಲಾಗಿರುತ್ತದೆ ಎಂಧರೆ ಸರಿ. ಆರೋಪಿತರು ನನ್ನ ಮೇಲೆ ಚಾಸಾ-೫ ರಿಂದ ೭ ರವರ ಮೇಲೆ ಹೊಲದಲ್ಲಿ ಹುಲ್ಲು ಕಿತ್ತಿದ ಸಲುವಾಗಿ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಬಾಟಿ ಕಿತ್ತಿದ ಸಲುವಾಗಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಸ.ನಂ.೯ ರಲ್ಲಿ ನಮ್ಮ ಪಾಲಿಗೆ ಬಂದ ಜಮೀನಿನಲ್ಲಿ ಕೇವಲ ಆರು ಎಕರೆ ಮಾತ್ರ ಉಳಿದಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂಧು ನುಡಿಯುತ್ತಾರೆ. ಸ.ನಂ. ೯ ರಲ್ಲಿ ಪಾಲು ವಾಟ್ನಿ ಆದ ನಂತರ ಆರೋಪಿತರು ಅವರ ಪಾಲಿಗೆ ಬಂದ ಜಮೀನಿನಲ್ಲಿ ಅವರು ಕಬ್ಜಾದಲ್ಲಿರುತ್ತಾರೆ, ನಮಗೆ ಬಂದ ಪಾಲಿಗೆ ಬಂದ ಜಮಿನಿನಲ್ಲಿ ನಾವು ಕಬ್ಜಾದಲ್ಲಿರುತ್ತೇವೆ ಎಂದರೆ ನನಗೆ ಅಷ್ಟೇನು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿತರು ನಮ್ಮ ಮೇಲೆ ಎರಡು ಪ್ರಕರಣವನ್ನು ದಾಖಲಿಸಿದ ಕಾರಣ ಈ ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿರುತ್ತೇನೆ ಎಂಧರೆ ಸರಿ ಅಲ್ಲ. ದಿ. ೨೮.೦೩.೨೦೨೩ ರಂದು ನಾನೇ ಆರೋಪಿತರೊಂದಿಗೆ ಜಗಳ ಮಾಡಿ ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ ಅಲ್ಲ. ಆರೋಪಿತರ ಜೊತೆ ನಾನೇ ಜಗಳ ಮಾಡಿದ ಕಾರಣದಿಂದ ಅವರು ಆಸ್ಪತ್ರೆಗೆ ತೋರಿಸಲು ಹೋಗಿದ್ದರು, ಪೋಲಿಸರೊಂದಿಗೆ ಶಾಮೀಲಾಗಿ ಆರೋಪಿತರ ಫಿರ್ಯಾದಿಯನ್ನು ಪಡೆದುಕೊಳ್ಳದ ಹಾಗೆ ಮಾಡಿರುತ್ತೇನೆ ಎಂಧರೆ ಸರಿ ಅಲ್ಲ.

ದಿ.೨೮.೦೩.೨೦೨೩ ರಂದು ಬೆಳಿಗ್ಗೆ ೮.೫೫ ಕ್ಕೆ ಆರೋಪಿತರು ನಮ್ಮ ಮನೆಗೆ ಬಂದು ನಮ್ಮನ್ನು ಹೊಡೆ ಬಡೆ ಮಾಡಿರುತ್ತಾರೆ. ನ್ಯಾಯಾಲಯದಲ್ಲಿ ದಾವೆ ಇದೆ ಅದರ ಪ್ರಕಾರ ಏನಾದರೂ ಆಗಲಿ ಎಂದು ಹೇಳಿದರೂ ನಮ್ಮನ್ನು ಹೊಡೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನಾನು ಪ್ರಜ್ಞೆ ತಪ್ಪಿ ಬಿದ್ದರೂ ನನಗೆ ಹೊಡೆ ಬಡೆ ಮಾಡಿರುತ್ತಾರೆ, ಚಾಸಾ-೫ ಮತ್ತು ೬ ರವರು ನನಗೆ ನೀರು ಹಾಕಿ ಪ್ರಜ್ಞೆ ಬರಿಸಿ ಒಳಗೆ ಹೋಗಿ ಕೂಡಿಸಿದ್ದರೂ ನನ್ನನ್ನು ಹೊಡೆ ಬಡೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿತರು ಅಷ್ಟೇ ಅಲ್ಲದೇ ಅವರ ಬೀಗರನ್ನು ಕರೆಯಿಸಿ ಹೊಡೆ ಬಡೆ ಮಾಡಿರುತ್ತಾರೆ, ನಂತರ ಅಕ್ಕ ಪಕ್ಕದ ಜನರು ಜಗಳ ಬಿಡಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನಾವು ಮನೆ ಒಳಗೆ ಕುಳಿತು ಸುಧಾರಿಸಿಕೊಂಡು ಆಸ್ಪತ್ರೆಗೆ ಹೋಗಿ ನಂತರ ಪೋಲಿಸ್ ಠಾಣೆಗೆ ಹೋಗಿ ಫಿರ್ಯಾದಿ ಸಲ್ಲಿಸಿರುತ್ತೇನೆ, ಮರುದಿನ ಬಂದು ಪೋಲಿಸರು ಪಂಚನಾಮೆ ಜರುಗಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಆರೋಪಿತರೆಲ್ಲರೂ ನಮ್ಮ ಮನೆಯ ಮುಂದೆ ಬಂದು ಏ ರಂಡಿ ಮಕ್ಕಳೇ ನಾವು ಜೋಳ ಕೊಯ್ಯಲು ಹೋದಾಗ ನಮಗೆ ತಕರಾರು ಮಾಡಿರುತ್ತೀರಿ ನಿಮ್ಮದು ಬಹಳ ಆಗಿದೆ ಎಂದು ಅವಾಚ್ಯ ಶಬ್ದಗಳಿಂದ ಬೈದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿ ನಂ.೨ ಮತ್ತು ೫ ರವರು ನನ್ನನ್ನು ಕೈಯಿಂದ ಹಿಡಿದು ಎಳೆದಾಡಿ ಹೊಡೆದಿರುತ್ತಾರೆ, ಆರೋಪಿ ನಂ.೬ ನನಗೆ ಎದೆಗೆ ಹಾಗೂ ಹೊಟ್ಟೆಗೆ ಕೈಯಿಂದ ಹೊಡೆದಿರುತ್ತಾರೆ, ಚಾಸಾ-೪ ರವರು ಬಿಡಿಸಲು ಬಂದಾಗ ಆರೊಪಿ ನಂ.೩ ಮತ್ತು ೪ ರವರು ಚಾಸಾ-೪ ರವರನ್ನು ಹೊಡೆ ಬಡೆ ಮಾಡಿರುತ್ತಾರೆ, ಆರೋಪಿ ನಂ.೬ ಚಾಸಾ-೫ ರವರಿಗೆ ಕೈಯಿಂದ ಹೊಡೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಚಾಸಾ-೬ ರವರು ಆರೋಪಿತರಿಗೆ ಜಗಳ ಮಾಡುವುದು ಸರಿಯಲ್ಲ, ಏನಾದರೂ ಹೆಚ್ಚು ಕಡಿಮೆ ಆದರೆ ನೀವೇ ಹೊಣೆ ಎಂದು ಹೇಳಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿ ನಂ.೬ರವರು  ಚಾಸಾ-೭ ರವರ ಕೈ ಹಿಡಿದು ಎಳೆದಾಡಿರುತ್ತಾರೆ, ಇವತ್ತು ಉಳಿದಿರಿ ಇನ್ನೊಮ್ಮೆ ನಮ್ಮ ತಂಟೆಗೆ ಬಂದರೆ ನಿಮ್ಮನ್ನು ಜೀವ ಸಹಿತ ಖಲಾಸ ಮಾಡುತ್ತೇವೆ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರುವಿಚಾರಣೆ : ಇರುವುದಿಲ್ಲ

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ